# ಶಿವಾರಪಟ್ಟಣದ ಶಿಲ್ಪಗಳು



■ ಚಿತ್ರ– ಬರಹ: **ಆದರ್ಶ ಪೈ**

**ಈ** ಊರಿನ ಹೆಸರೇ ಶಿಲ್ಪಿ ಶಿವಾರಪಟ್ಟಣ. ಊರಿಗೆ ಊರೇ ಕಲಾವಿದರ ಮನೆಗಳಿಂದ ತುಂಬಿದೆ. ಸುಮಾರು 40ಕ್ಕೂ ಹೆಚ್ಚು ಕುಟುಂಬಗಳು ಇಲ್ಲಿ ಶಿಲ್ಪಕಲೆಯನ್ನೇ ವೃತ್ತಿ, ಹವ್ಯಾಸವನ್ನಾಗಿಸಿಕೊಂಡು ಬದುಕುತ್ತಿವೆ. ಊರ ತುಂಬ ಒಂದು ಸುತ್ತು ಹೊಡೆದರೆ ಎಲ್ಲಿ ನೋಡಿದರಲ್ಲಿ ಕಲಾವಿದರು ಮೂರ್ತಿ ಕೆತ್ತನೆಯಲ್ಲಿ ತೊಡಗಿರುತ್ತಾರೆ.

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಶಿಲ್ಪಿ ಶಿವಾರ ಪಟ್ಟಣ ಎಂಬ ಹಳ್ಳಿಯಲ್ಲಿ 20 ವರ್ಷಗಳಿಂದ ವಾಸವಾಗಿರುವ ಕಲಾವಿದ ಎಮ್.ಎನ್.ಆನಂದ ಕುಮಾರ ತಮ್ಮ 7ನೇ ವಯಸ್ಸಿನಲ್ಲೇ ಕೈಯಲ್ಲಿ ಸುತ್ತಿಗೆ ಹಾಗೂ ಛೇಣಿಯನ್ನು ಹಿಡಿದು ಮೂರ್ತಿಗಳನ್ನು ತಯಾರಿಸಲು ಆರಂಭಿಸಿದವರು. 3ನೇ ತರಗತಿವರೆಗೆ ಓದಿರುವ ಈ ಕಲಾವಿದ ಮೂರ್ತಿ ಕೆತ್ತನೆಯನ್ನೇ ಜೀವನ ಪಾಠ ಮಾಡಿಕೊಂಡವರು. ಮಾರ್ಗೇಶ ಆಚಾರ್ಯ, ರಾಮಚಂದ್ರ ಗೌಡರು ಹಾಗೂ ಎಸ್.ಕೆ.ಶ್ಯಾಮಣ್ಣ ಇವರ ಅವರ ಮಾರ್ಗದರ್ಶಕರು. ಈವರೆಗೆ ಇಪ್ಪತ್ತು ಸಾವಿರಕ್ಕೂ ಹೆಚ್ಚು ಕಲ್ಲಿನ ಹಾಗೂ ಪಂಚಲೋಹದ ಮೂರ್ತಿಗಳನ್ನು ತಯಾರಿಸಿದ್ದಾರೆ. ದೇವರ ಮೂರ್ತಿಗಳು, ಸ್ವಾತಂತ್ರ್ಯ ಯೋಧರು, ಸಿನಿಮಾ ಕಲಾವಿದರು ಮತ್ತಿತರರ ಮೂರ್ತಿಗಳನ್ನೂ ತಯಾರಿಸಿದ್ದಾರೆ. ಇವರು ಕಟೆದ ಶಿಲ್ಪಗಳಿಗೆ ಕರ್ನಾಟಕದಲ್ಲಷ್ಟೇ ಅಲ್ಲದೆ ನೆರೆಯ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಕೇರಳಗಳಲ್ಲೂ ಬೇಡಿಕೆ ಇದೆ.



‘ಗ್ರಾಹಕರಿಗೆ ಹೇಳಿರುವ ಅವಧಿಯಲ್ಲಿ ಮೂರ್ತಿಗಳನ್ನು ತಯಾರಿಸಿ ಕೊಡಲೇಬೇಕು. ನಮ್ಮದೇನಿದ್ದರೂ ಕಲಾ ಸಾಮರ್ಥ್ಯ. ಆದರೆ ವಿದ್ಯುತ್‌ನದೇ ನಮಗೆ ದೊಡ್ಡ ಸಮಸ್ಯೆ. ನಮ್ಮ ಕೆಲಸಕ್ಕೆ ಮತ್ತು ಕಲಾಸಕ್ತರ ಬೇಡಿಕೆಗಳನ್ನು ಪೂರೈಸುವುದಕ್ಕೆ ಪೂರಕ ಮೂಲ ಸೌಕರ್ಯಗಳಿಲ್ಲ’ ಎಂದು ವಿಷಾದದಿಂದ ಹೇಳುತ್ತಾರೆ ಆನಂದ ಕುಮಾರ.

ಆನಂದಕುಮಾರ ಅವರದ್ದು ಪೈಲ್ವಾನ್ ಕುಟುಂಬ. ಶಿಲ್ಪ ಕೆತ್ತನೆಯ ಯಾವುದೇ ಪರಂಪರೆಗೆ ಇವರು ಸೇರಿದವರಲ್ಲ. ತಂದೆ ನಾರಾಯಣಪ್ಪ ಕೂಡ ಕುಸ್ತಿ ಪೈಲ್ವಾನ್ ಆಗಿದ್ದರು. ಶಿಲ್ಪ ಕೆತ್ತನೆಯಲ್ಲಿ ಆಸಕ್ತಿ ಮತ್ತು ವೃತ್ತಿಪರತೆ ಎರಡನ್ನೂ ಉಳಿಸಿಕೊಂಡು ಬಂದಿರುವ ಈ ಕಲಾವಿದ ‘ತಿಂಗಳಿಗೆ ಸರಿಸುಮಾರು 20 ಸಾವಿರ ರೂಪಾಯಿ ಲಾಭಕ್ಕೆ ಮೋಸವಿಲ್ಲ’ ಎನ್ನುತ್ತಾರೆ.

ಮೈಸೂರು, ಹೊಸದುರ್ಗದಿಂದ ಮೂರ್ತಿಗಳನ್ನು ತಯಾರಿಕೆಗೆ ಬೇಕಾದ ಕಲ್ಲು ತರುತ್ತಾರೆ. ಗಡಬಂದ, ಕಾರಂಬಿನಿ ಯಂತಹ ಕಲ್ಲುಗಳನ್ನೇ ಹೆಚ್ಚಾಗಿ ಬಳಸುತ್ತಾರೆ.

